ನಾಚಿ ಸಿಗ್ಗಿನಿಂದ ಕೆಂಪಗಾಗಿ ಡ್ರೈವರನನ್ನುದ್ದೇಶಿಸಿ ಅಳುದನಿಯಲ್ಲಿ), ''ಯಣಾ, ನೋಡಿಲ್ಲಿ ಕಾಮಗೇರಿ ಪ್ಯಾಸೆಂಜರ್ ರೊಕ್ಕ ಕೊಡವಲ್ಲರು.'' (ಇವರ ಸರಸಾಟ ಆಲಿಸುತ್ತಲಿದ್ದ ಡ್ರೈವರ್) ''ಕೊಡಬೇ ಅತ್ಲಾಗ. ಲೇ, ಮಂದೀಕಡೆ ಚಲೋತ್ನಾಗ ರೊಕ್ಕ ಇಸಗೊಳ್ಳಾಕ ಬರಂಗಿಲ್ಲಂದ್ರ ಯಾಕ್ ಬರ್ತೀ?'' ಕಡೆಗೆ ಬೃಂದಾವನದ ಗೋಪಿಕೆಯರು ರವಿಕೆಯಲ್ಲಿದ್ದ ಪಾಕೀಟು ತೆಗೆದು ಚಾರ್ಜು ಸಲ್ಲಿಸಿ ಪೋರಕೃಷ್ಣನ ಕೆನ್ನೆಹಿಂಡಿ ಕೈಬಿಟ್ಟರು.

ಪಯಣದಲ್ಲಿ ಮುನಿಸು ಒಲುಮೆಯ ಹೊಳೆಗಳು ಸದಾ ಉಕ್ಕಿ ಹರಿಯುತ್ತವೆ. ಬನಶಂಕರಿ ಜಾತ್ರೆಯಿಂದ ಮರಳುವಾಗ ನಡೆದ ಪ್ರಸಂಗವಿದು: ಬಸ್ಸಿನಲ್ಲಿದ್ದ ರೈತಾಪಿ ತರುಣನ ಬಿಳಿಅಂಗಿ ಪಂಚೆ, ತರುಣಿಯ ಹೊಸ ಇಳಕಲ್ ಸೀರೆ, ಕೈತುಂಬ ಕರಿಬಳೆ, ಅರಿಸಿನದ ಕೆನ್ನೆ, ನವವಿವಾಹಕ್ಕೆ ಸಾಕ್ಷಿಯಾಗಿದ್ದವು. ಚಾಲಕನ ಹಿಂಬದಿ ಸೀಟಿನಲ್ಲಿ ಅವರು ಆಸೀನರಾಗಲು, ಇಡೀ ಬಸ್ಸು ಪ್ರೇಕ್ಷಕನಾಯಿತು. ಅವಳು ಹೆಗಲಮೇಲೆ ತಲೆಯೊರಗಿಸುವುದು, ಯಾವುದೊ ತುಂಟಮಾತಿಗೆ ತಲೆ ಮೊಟಕುವುದು, ಸೋಟೆ ತಿವಿಯುವುದು; ಅವನು ಅವಳ ಕೊರಳ ಬಳಸುವುದು, ಮಡಿಲಲ್ಲಿ ಮಲಗುವುದು, ತಾನು ಕಚ್ಚಿದ ಸೀಬೆಯನ್ನು ಆಕೆಗೂ ತಿನಿಸುವುದು ಹೀಗೆ ಮರ್ಯಾದೆಗೆರೆ ಮೀರದ ಚೇಷ್ಟೆಗಳಿದ್ದವು. ಒಣಹೊಲಗಳ ನಡುವೆ ಬಿರು ಬೇಸಗೆಯಲ್ಲಿ ಚಲಿಸುವ ಬಸ್ಸಿನೊಳಗೆ, ಈ ಪ್ರೇಮಲೋಕ ತಂಪಿನ ಮಳೆಗರೆಯುತ್ತಿತ್ತು. ಅಷ್ಟರಲ್ಲಿ ಪ್ರೇಕ್ಷಕರ ರನಿಂಗ್ ಕಾಮೆಂಟರಿ ಚಾಲುಗೊಂಡಿತು. ''ಸೀಮೆಗಿಲ್ಲದೋವು, ತಾವೇ ಲಗ್ನ ಆದೋರು, ಬೇರೆ ಯಾರಾಗಿಲ್ಲ. ಕುಶಿಯಾಟ ತಂತಂ ಮನ್ಯಾಗ ಮಾಡಕೋಬೇಕು. ಮಕ್ಕಳುಮರಿ ಇರೋ ಗಾಡ್ಯಾಗ ಅವಾಡದ ನೋಡು. ಮೀಸೆ ಬಂದೋನಿಗೆ ದೇಶ ಕಾಣಲಿಲ್ಲ ಅದೇನೊ ಬಂದೋಳಿಗೆ ನೆಲ ಕಾಣಲಿಲ್ಲ ಅಂತ. ಈಗಿನ ಹುಡ್ರವ್ವ, ತಲ್ಯಾಗೇ ನಡೀತಾವೆ. ಹೇಳೋರು ಕೇಳೋರು ಯಾರೂ ಇಲ್ಲದಂಗಾಗ್ಯೆತಿ.'' ಜವ್ವನಿಗರ ಪ್ರೇಮಚೇಷ್ಟೆ ಮುದಿಬೊಡ್ಡೆಯನ್ನು ಚಿಗುರಿಸುವ ಬದಲು, ಕಾಡ್ಗಿಚ್ಚು ಹೊತ್ತಿಸುತ್ತಿತ್ತು. ಕಿಡಿ ಹಾರಿಸುವ ಬೊಡ್ಡೆಗಳಾದರೂ ತಮ್ಮ 'ಆ' ದಿನಗಳಲ್ಲಿ 'ಈ' ಆಟವಾಡಿದವರೇ. ಆದರೂ ಯಾಕೀ ಕುದಿತ? ಮರಳಿ ಬಾರದಂತೆ ಜಾರಿಹೋಗಿರುವ ಯೌವನದ ಮೇಲಿನ ಕಿನಿಸೇ? ಮದುಮಕ್ಕಳು ತಮ್ಮೂರು ಬಂದಾಗ ಇಳಿದುಕೊಂಡರು. ಅವರು ಹೋದದ್ದೇ ಲಗ್ನಮುಗಿದ ಚಪ್ಪರದಂತೆ ಬಸ್ಸು ಬಣಗುಡತೊಡಗಿತು. ಅವರು ಯಕ್ಷಯಕ್ಷಿಯರಂತೆ ಬಸ್ಸಿಗೆ ಜೀವ ತುಂಬಿದ್ದರು ಎಂದು ಎಲ್ಲರಿಗೂ ಮನವರಿಕೆಯಾಯಿತು.

ಒಲುಮೆಗೆ ಯೌವನ ಅನಿವಾರ್ಯವೇ? ಅಲ್ಲವೆಂದು ಕಾಣಿಸಿದವರು ಹಂಪಿ ಎಕ್ಸ್‌ಪ್ರೆಸ್ಸಿನಲ್ಲಿ ಸಿಕ್ಕ ವೃದ್ಧದಂಪತಿ. ಗಂಡ ಜವಾರಿಗನ್ನಡದಲ್ಲಿ ನಮ್ಮೊಡನೆ ಮಾತಾಡುತ್ತ, ಸಾರಾಂಶವನ್ನು ಗುಜರಾತಿಯಲ್ಲಿ ಮಡದಿಗೆ ಅನುವಾದಿಸುತ್ತ ಇದ್ದನು. ನಾನು ಸುಮ್ಮನಿರಲಾರದೆ 'ಅಮ್ಮನಿಗೆ ಕನ್ನಡ ಬರಲ್ಲವಾ?' ಎಂದೆ. ಅಂದದ್ದೇ ತಡ, ಅರೆ ಶತಮಾನದ ಹಿಂದಿನ ಪಿಕ್ಚರಿನ ರೀಲು ಬಿಚ್ಚಿಕೊಂಡಿತು. ಗುಜರಾತಿನ ವಿದ್ಯುತ್ ಇಲಾಖೆಯಲ್ಲಿ ಎಂಜಿನಿಯರಾಗಿದ್ದಾಗ ಪ್ರೇಮಿಸಿ ಲಗ್ನವಾದವರಂತೆ. ಕೊನೆಯ ದಿನಗಳನ್ನು ಹುಟ್ಟಿದೂರಲ್ಲಿ ಕಳೆಯಲೆಂದು ಗಂಡ ಕರೆತಂದಿದ್ದಾನೆ. ಮಡದಿಗೆ ಕನ್ನಡ ಕಲಿಸುವಲ್ಲಿ ಸೋತಿದ್ದಾನೆ: 'ಸಾವರ ಸಲ ಹೇಳೀನ್ರೀ ಕಲೀಕಲೀ ಅಂತ. ಕಲೀವಲ್ಲಳು. ನನಗ ಯಾರೂ ಮಾತಾಡ್ಸಲ್ಲ. ಗುಜರಾತಲ್ಲಿ ಸುಖವಾಗಿದ್ದೆ. ನಿನ್ನ ದೇಶಕ್ಕೆ ಕರಕೊಂಡು ಬಂದು ಹಾಕಿ, ಒಂಟಿ ಮಾಡಡದೆ ಅಂತ ಬೈತಾಳ' ಎಂದನು. ಬಾನು 'ಬಜಾರಿಗೆ ಹೋದರೆ ಹೆಂಗೆ ಮಾಡ್ತಾರೆ?' ಎನ್ನಲು, 'ಕಾಯಿಪಲ್ಲೆಯವರಿಗೆಲ್ಲ ಗುಜರಾತಿ ಕಲಿಸಿಬಿಟ್ಟಾಳ್ರಿ' ಎಂದು ಉತ್ತರ ಸಿಕ್ಕಿತು. ತನ್ನ ಗುಣಗಾನ ನಡೆಯುತ್ತಿದೆ ಎಂದಾಕೆಗೆ ಗೊತ್ತಾಗಿ, ಹನಿ ಒಡೆಯಲಿಕ್ಕೆ ಬಂದಂಥ ಮೋಡ ಮುಸುಕು